## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಹಾಗೂ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿಯ ಮುಂದೆ ಬರುವ ಪ್ರಸ್ತಾವನೆಗಳಿಗೆ ಅವಶ್ಯಕವಿರುವ ಜಮೀನನ್ನು ಪರಿಶೀಲಿಸಲು ಜಮೀನು ಪರಿಶೋಧನಾ ಸಮಿತಿ (Land Audit Committce) ಯನ್ನು ರಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರಿ ಆದೇಶ ಸಂಖ್ಯೆ: ಸಿಐ 158 ಎಸ್‌ಪಿಐ 2011, ದಿನಾಂಕ: 24.06.2013.

-:o:-

**ಪ್ರಸ್ತಾವನೆ:**

ಕೈಗಾರಿಕೆ ಸ್ಥಾಪನಾ ಪ್ರಸ್ತಾವನೆಗಳು ಅನೇಕ ಸಲ ತಮ್ಮ ಅವಶ್ಯಕತೆಗಿಂತಲೂ ಹೆಚ್ಚಿನ ಜಮೀನನ್ನು ಕೋರುತ್ತಿದ್ದು, ಇದರಿಂದಾಗಿ ಹೆಚ್ಚಿನ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗುತ್ತಿದೆ ಎಂದು ಸಾರ್ವಜನಿಕರಿಂದ ಆಕ್ಷೇಪಣೆಗಳು ಬರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ (SLSWCC) ಹಾಗೂ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಮುಂದೆ ಬರುವ ಪ್ರಸ್ತಾವನೆಗಳಿಗೆ ಅವಶ್ಯವಿರುವ ಜಮೀನಿನ ಬಗ್ಗೆ ಸಲಹೆ ನೀಡಲು ಜಮೀನು ಪರಿಶೋಧನಾ ಸಮಿತಿ ರಚಿಸುವುದು ಅವಶ್ಯವಿದ್ದ ಕಾರಣ, ದಿನಾಂಕ: 17.06.2013 ರಂದು ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಯಲ್ಲಿ ಮಾನ್ಯ ಮುಖ್ಯಮಂತ್ರಿಗಳು ಜಮೀನು ಪರಿಶೋಧನಾ ಸಮಿತಿ ರಚಿಸಬೇಕು ಹಾಗೂ ಎಲ್ಲಾ ಪ್ರಸ್ತಾವನೆಗಳ ಜಮೀನಿನ ಅವಶ್ಯಕತೆ ಬಗ್ಗೆ ಮೊದಲೇ ತಿಳಿಸಬೇಕೆಂದು ಸೂಚಿಸಿದ ಹಿನ್ನೆಲೆಯಲ್ಲಿ, ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (SLSWCC) ಮುಂದೆ ಬರುವ ಪ್ರಸ್ತಾವನೆಗಳಿಗೆ ಅವಶ್ಯವಿರುವ ಜಮೀನು ಪರಿಶೀಲಿಸಲು ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜಮೀನು ಪರಿಶೀಲನಾ ಸಮಿತಿ (Land Audit Committee) ಯನ್ನು ರಚಿಸಿ ಮೇಲೆ ಓದಲಾದ (1)ರ ಆದೇಶವನ್ನು ಹೊರಡಿಸಲಾಗಿದೆ.

ಪ್ರಸ್ತುತ, ಜಮೀನು ಪರಿಶೀಲನಾ ಸಮಿತಿ (Land Audit Committce) ಯು ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಮಾಡಲು ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜಮೀನು ಪರಿಶೀಲನಾ ಸಮಿತಿ (Land Audit Committee) ಸಮಿತಿಯನ್ನು ಪುನರ್ ರಚಿಸಬೇಕೆಂದು ನಿರ್ಧರಿಸಲಾಗಿರುತ್ತದೆ.

ಅದರಂತೆ ಈ ಮುಂದಿನ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಸಿಐ 158 ಎಸ್‌ಪಿಐ 2011, ಬೆಂಗಳೂರು, ದಿನಾಂಕ: 17.05.2014**

ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ನೀಡಿಕೆ ಸಮಿತಿ ಸಭೆ (SHLCC) ಹಾಗೂ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿ ಸಭೆ (SLSWCC) ಮುಂದೆ ಬರುವ ಎಲ್ಲಾ ಪ್ರಸ್ತಾವನೆಗಳಿಗೆ ಅವಶ್ಯವಿರುವ ಜಮೀನನ್ನು ಪರಿಶೀಲಿಸಲು ಹಾಗೂ ಮಂಜೂರು ಮಾಡಲು ಶಿಫಾರಸ್ಸು ಮಾಡುವುದಕ್ಕಾಗಿ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜಮೀನು ಪರಿಶೀಲನಾ ಸಮಿತಿ (Land Audit Committee) ಯನ್ನು ಈ ಮುಂದಿನಂತೆ ಪುನರ್ ರಚಿಸಲಾಗಿದೆ.

| | | | |
|---|---|---|---|
| 1. | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | : | ಅಧ್ಯಕ್ಷರು |
| 2. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ | : | ಸದಸ್ಯರು |
| 3. | ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ | : | ಸದಸ್ಯರು |
| 4. | ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ | : | ಸದಸ್ಯ ಕಾರ್ಯದರ್ಶಿ |
| 5. | ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಕೆ.ಐ.ಎ.ಡಿ.ಬಿ. | : | ಸದಸ್ಯರು |
| 6. | ಮುಖ್ಯ ಸಲಹೆಗಾರರು, ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್) | : | ಸದಸ್ಯರು |
| 7. | ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ | : | ಸದಸ್ಯರು |
| 8. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ | : | ಸದಸ್ಯರು |
| 9. | ರಾಜ್ಯ ಪರಿಸರ ಮಾಲಿನ್ಯ ಮಂಡಳ ಸದಸ್ಯ ಕಾರ್ಯದರ್ಶಿ | : | ಸದಸ್ಯರು |

ಜಮೀನು ಪರಿಶೀಲನಾ ಸಮಿತಿ (Land Audit Committee) ಯು ಜಮೀನಿನ ಅವಶ್ಯಕತೆಯನ್ನು ಪರಿಗಣಿಸುವಾಗ:

a) ಬಂಡವಾಳ ಹೂಡಿಕೆಯ ಪ್ರವರ್ತಕರು ಕೇಳಿದ ಜಮೀನಿನ ಪ್ರಸ್ತಾಪಿತ ಉಪಯೋಗವನ್ನು ಪರಿಶೀಲಿಸಬೇಕು ಹಾಗೂ ಕೇಳಿರುವ ಜಮೀನು ಸ್ವಾಧೀನ ಆಗಿದೆಯೇ ಅಥವಾ ಇಲ್ಲವೇ ಮತ್ತು ಕೆಐಎಡಿಬಿ ಯಿಂದ ಜಮೀನು ಹಂಚಿಕೆ ಮಾಡುವ ಹಂತದಲ್ಲಿ ಇದೆಯೇ ಎಂಬುದನ್ನೂ ಕೂಡ ಪರಿಶೀಲಿಸಬೇಕು. ಸದರಿ ಕೈಗಾರಿಕಾ ಪ್ರದೇಶದಲ್ಲಿ ವಿದ್ಯುತ್, ನೀರು ಮತ್ತು ಇತರೆ ಮೂಲಭೂತ ಸೌಕರ್ಯಗಳು ಇದೆಯೇ ಎಂಬುದನ್ನು ಪರಿಶೀಲಿಸಬೇಕು.

b) ಬಂಡವಾಳ ಹೂಡಿಕೆಯ ಪ್ರವರ್ತಕರು ಕೇಳುತ್ತಿರುವ ಜಮೀನಿನ ಸದ್ಯದ ಸ್ಥಿತಿಗತಿಗಳನ್ನು ಅಂದರೆ ಕೈಗಾರಿಕಾ ಪ್ರದೇಶ / ಕೃಷಿ ಭೂಮಿಯೇ / ಬಂಜರು ಭೂಮಿಯೇ / ಸರ್ಕಾರದ ಜಮೀನೇ / ಪರಿವರ್ತಿತ ಜಮೀನೇ ಅಥವಾ ನಿಗದಿತ ಹಸಿರು ವಲಯವೇ ಎಂಬುದನ್ನು ವರದಿಯಲ್ಲಿ ಹೆಸರಿಸಬೇಕು.

c) ಕೈಗಾರಿಕಾ ವಿಸ್ತರಣಾ ಕಾರ್ಯಕ್ರಮಕ್ಕೆ ಬೇಕಾದ ಜಮೀನನ್ನೂ ಕೂಡಾ ಪರಿಗಣನೆಗೆ ತೆಗೆದುಕೊಳ್ಳಬೇಕು.

d) ಇದಲ್ಲದೇ, ಏಕಘಟಕ ಸಂಕೀರ್ಣಕ್ಕೆ ಪ್ರಸ್ತಾಪಿಸಿದ ಜಮೀನು ನೀರಾವರಿಯ ಜಮೀನೇ ಅಥವಾ ಕೃಷಿ ಯೋಗ್ಯದ ಜಮೀನೇ ಎಂಬುದನ್ನೂ ಕೂಡಾ ಪರಿಶೀಲಿಸಬೇಕು.

ೞ) ಭೂಮಿ ಹಂಚಿಕೆ ಕುರಿತಂತೆ ಈ ಹಿಂದೆ ಹೊರಡಿಸಲಾದ ಎಲ್ಲಾ ಆದೇಶ / ಮಾರ್ಗಸೂಚಿಗಳನ್ನು ರದ್ದುಪಡಿಸಿ, ಕೆಐಎಡಿ ಕಾಯ್ದೆ 1966 ರ ಕಲಂ 17 ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ, ಯಾವುದೇ ಯೋಜನೆಗಳಿಗೆ ನೇರವಾಗಿ ಜಮೀನು ಹಂಚಿಕೆ ಮಾಡಬಾರದೆಂದು ನಿರ್ದೇಶಿಸಲಾಗಿದೆ. ಜಮೀನು ಪರಿಶೋಧನಾ ಸಮಿತಿಯು ಪರಿಶೋಧನೆಯ ಅಗತ್ಯ ಇದ್ದಲ್ಲಿ ಅದರ ಅಭಿಪ್ರಾಯದೊಂದಿಗೆ ಎಸ್‌ಹೆಚ್‌ಎಲ್‌ಸಿಸಿ ಮತ್ತು ಎಸ್‌ಎಲ್‌ಎಸ್‌ಡಬ್ಲ್ಯೂಸಿಸಿ ಸಮಿತಿಗಳಲ್ಲಿ ಅನುಮೋದನೆಗೊಂಡ ಯೋಜನೆಗಳಿಗೆ ಮಾತ್ರ ಹಂಚಿಕೆ ಮಾಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ. ರತ್ನ ಪ್ರಭಾ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ,

1. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ – ಮುಂದಿನ ಗೆಜೆಟ್‌ನಲ್ಲಿ ಪ್ರಕಟಿಸಿ, 100 ಪ್ರತಿಗಳನ್ನು ಈ ಶಾಖೆಗೆ ಒದಗಿಸಲು ಕೋರಿದೆ.
2. ಆಯುಕ್ತರು, ಕೈಗಾರಿಕಾಭಿವೃದ್ಧಿ ಹಾಗೂ ನಿರ್ದೇಶಕರು, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು-01.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-01.
6. ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು ಹಾಗೂ ಕಾರ್ಯ ನಿರ್ವಾಹಕ ಸದಸ್ಯರು, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ನೃಪತುಂಗ ರಸ್ತೆ, ಬೆಂಗಳೂರು-01.
7. ಉಪ ಕುಲಪತಿಗಳು, ಕೃಷಿ ವಿಶ್ವವಿದ್ಯಾಲಯ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಹೆಬ್ಬಾಳ, ಬೆಂಗಳೂರು.
8. ಮುಖ್ಯ ಸಲಹೆಗಾರರು ಹಾಗೂ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ, ಕರ್ನಾಟಕ ತಾಂತ್ರಿಕ ಸಲಹಾ ಸೇವಾ ಸಂಸ್ಥೆ (ಟೆಕ್ಸಾಕ್), ಬಸವ ಭವನ, ಬಸವೇಶ್ವರ ವೃತ್ತ, ಬೆಂಗಳೂರು-01.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಉದ್ಯೋಗ ಮಿತ್ರ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-01.
10. ನಿರ್ದೇಶಕರು (ತಾಂತ್ರಿಕ ಕೋಶ), ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-01.
11. ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, ವಿಕಾಸಸೌಧ, ಬೆಂಗಳೂರು-01.
12. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.